ಬೀಜ ಗೊಬ್ಬರಗಳಿಗಾಗಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಎಸಿನಿಟ್ಸ್‌ಗಳನ್ನು ಕೊಡುವುದಕ್ಕೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ೫೭ ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡುತ್ತದೆ. ಸಬ್ಸಿಡಿಯಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಕೇಂದ್ರಸರ್ಕಾರವನ್ನೂ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರ ಜೊತೆಗೆ ಬೆಳೆಗಳಿಗೆ ರೋಗಗಳು ಸಾಕಷ್ಟು ಜಾಸ್ತಿ ಇವೆ. ಹತ್ತಿ ರೋಗಕ್ಕೆ ಸಿಂಪಡಿಸುವ ಸಿಂಭೂಶ್ ಔಷಧಿ ಲೀಟರ್‌ಗೆ ೮೫೦ ರೂಪಾಯಿ ಇದೆ. ಭತ್ತಕ್ಕೆ ಹಾಕುವ ಸುಮಿಸಡಾನ್‌ಗೆ ೩೫೦ ರೂಪಾಯಿ ಒಂದು ಲೀಟರ್‌ಗೆ ಇದೆ ಈ ಬೆಲೆಗಳು ಬಹಳ ದುಬಾರಿಯಿದ್ದು ರೈತರಿಗೆ ಇವನ್ನು ಕೊಂಡುಕೊಳ್ಳಲು ಶಕ್ತಿ ಇಲ್ಲ. ಈ ಬೆಲೆ ನಿಯಂತ್ರಣ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಇದೆಯೆ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ೫೭ ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದೇನೆ. ಈ ವರ್ಷ ಹತ್ತಿಗಾಗಲೀ, ಭತ್ತಕ್ಕಾಗಲೀ ಇವುಗಳಿಗೆ ರೋಗ ತಗುಲಿದ್ದು ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ಹೇಳಿದ್ದೀರಿ. ಇದರ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಕೇಳಿದ್ದು ಬೆಲೆ ನಿಯಂತ್ರಣದ ಬಗ್ಗೆ. ಸಾಮಾನ್ಯ ರೈತ ಸಿಂಭೂಶ್ ಔಷಧಿಯನ್ನು ಲೀಟರ್ ೬೦೦-೭೦೦ ರೂಪಾಯಿ ಕೊಟ್ಟು ಕೊಂಡುಕೊಳ್ಳುವ ಶಕ್ತಿ ಹೊಂದಿಲ್ಲ. ಇದನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರದಲ್ಲಿ ಏನು ವ್ಯವಸ್ಥೆ ಮಾಡಿಕೊಂಡಿದ್ದೀರಿ ? ಇದು ನನ್ನ ಮೊದಲನೇ ಪ್ರಶ್ನೆ ನೇರವಾಗಿ ಕೇಳಿದ್ದು. ಇಷ್ಟೊಂದು ರೋಗ ಇರತಕ್ಕಂಥ ಸಂದರ್ಭದಲ್ಲಿ ಪೈರು ಸಂಪೂರ್ಣವಾಗಿ ನಾಶವಾಗುತ್ತಿದೆ. ಯಾವಾಗ ಹಣ ಬಿಡುಗಡೆ ಮಾಡಿದ್ದೀರಿ ? ಈ ವರ್ಷ ಏನು ವ್ಯವಸ್ಥೆ ಮಾಡಿದ್ದೀರಿ ? ಇದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ರೇಟು ನಿಯಂತ್ರಣ ಮಾಡುವುದು ನಮ್ಮ ಕೈಯಲ್ಲಿಲ್ಲ. ಬೇರೆ ಬೇರೆ ಕಂಪನಿಗಳು ಇವನ್ನು ತಯಾರು ಮಾಡುತ್ತವೆ. ನಾವು ವಿತರಣೆ ಮಾಡುವುದು ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ. ಈ ರೇಟು ಏನಿದೆ, ಇದು ಔಷಧಿ ತಯಾರಕರ ಅವರ ಕಾಸ್ಟ್ ಆಫ್ ಪ್ರೊಡಕ್ಷನ್ ಅನ್ನು ಅವಲಂಬಿಸಿರುತ್ತದೆ. ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದಲೇ ೫೦ ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ನಿಮ್ಮದು ಆಯಿತು. ಮೂರು ಪ್ರಶ್ನೆಗಳನ್ನು ಕೇಳಿದ್ದೀರಿ. ಕುಳಿತುಕೊಳ್ಳಿ.

ಶ್ರೀ ಬಿ ಶಿವರಾಮರೆಡ್ಡಿ.—ಈಗ ಸಿಂಬೂಶ್ ಔಷಧಿಯನ್ನು ಲೀಟರ್ ಒಂದಕ್ಕೆ ಎಂಟುನೂರು ಚಿಲ್ಲರೆ ರೂಪಾಯಿಗೆ ಮಾರ್ಕೆಟ್‌ನಲ್ಲಿ ಮಾರಾಟ ಮಾಡಲು ಸರ್ಕಾರದ ಪರವಾನಗಿಯನ್ನು ತೆಗೆದುಕೊಂಡಿದ್ದಾರೆಯೇ ?

ಶ್ರೀ ಆರ್. ವಿ. ದೇಶಪಾಂಡೆ.—ಈಗ ಮಾರಾಟ ಮಾಡುತ್ತಿರುವುದು ಸರ್ಕಾರದ ಪುಂಚಾಂತರ ಆಗ್ರೊ ಇಂಡಸ್ಟ್ರೀಸ್ ಮೂಲಕವೇ. ಪ್ರೈವೇಟ್‌ನವರು ಮಾರಾಟ ಮಾಡುತ್ತಿರುವುದರ ಬಗ್ಗೆ ನನಗೆ ಕಲ್ಪನೆ ಇಲ್ಲ. ಇದರ ಬಗ್ಗೆ ಚೌಕಾಶಿ ಮಾಡುತ್ತೇನೆ.

ಪಣಂಬೂರು-ಜೋಕಟ್ಟೆ ರಸ್ತೆಯ ದುರಸ್ತಿ.

೨೯೩. ಶ್ರೀ ಎನ್. ಎಂ. ಆಡ್ಯಂತಾಯ (ಸುರತ್‌ಕಲ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಪಣಂಬೂರು-ಜೋಕಟ್ಟೆ ರಸ್ತೆ ಕಳವಾರು ಮಾರ್ಗವಾಗಿ ತೆರಳುವ ರಸ್ತೆಯನ್ನು ದುರಸ್ತಿ ಮಾಡಿಸಿ ಎಷ್ಟು ವರ್ಷಗಳಾದವು ?

ಆ) ಈ ರಸ್ತೆ ತುಂಬಾ ನಾಡು ರಸ್ತೆಯಾಗಿದ್ದು ಜನರ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರದವರು ತಕ್ಷಣ ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಎ) ಕಳೆದ ಮೂರು ವರ್ಷಗಳಲ್ಲಿ (೮೪–೮೫ ರಿಂದ ೮೬–೮೭ ಪೂರ್ತಿ) ಅಭಿವೃದ್ಧಿ ಮತ್ತು ದುರಸ್ತಿಗಾಗಿ, ಮರವೂರು – ಜೋಕಟ್ಟೆ – ಪಣಂಬೂರು ರಸ್ತೆಗೆ ೩,೯೪,೧೩೦ ರೂ. ಗಳನ್ನು ಮತ್ತು ಕಳವಾರು—ಜೋಕಟ್ಟೆ ರಸ್ತೆಗೆ ೭೭,೪೧೬ ರೂ. ಗಳನ್ನು ಖರ್ಚು ಮಾಡಲಾಗಿದೆ.

ಆ) ವರ್ಷ ವರ್ಷ, ದೊರಕುತ್ತಿರುವ ಹಣದ ಲಭ್ಯತೆಗನುಗುಣವಾಗಿ ಈ ರಸ್ತೆಗಳ ದುರಸ್ತಿ ಕೆಲಸಗಳನ್ನು ಕೈಗೊಂಡು, ಜನಸಂಚಾರಕ್ಕೆ ತೊಂದರೆಯಾಗದಂತೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಪ್ರಯತ್ನಿಸಲಾಗುತ್ತಿದೆ.

ಇ) ಈ ರಸ್ತೆಯು ೮೭–೮೮ರ ಸಾಲಿನಿಂದ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎನ್. ಎಂ ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ. ಈ ರಸ್ತೆ ಯಾವ ಸ್ಥಿತಿಯಲ್ಲಿದೆ ಎಂದರೆ ಈ ರಸ್ತೆಯಲ್ಲಿ ಹೋಗತಕ್ಕಂಥ ಬಸ್ಸಿನಲ್ಲಿ ಇಬ್ಬರು ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಆಯಿತು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ಆ) ಪ್ರಶ್ನೆಗೆ ವರ್ಷ ವರ್ಷ ದೊರಕುತ್ತಿರುವ ಹಣದ ಲಭ್ಯತೆಗನುಗುಣವಾಗಿ ಈ ರಸ್ತೆಗಳ ದುರಸ್ತಿ ಕೆಲಸಗಳನ್ನು ಕೈಗೊಂಡು ಜನಸಂಚಾರಕ್ಕೆ ತೊಂದರೆಯಾಗದಂತೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದ್ದಾರೆ. (ಇ) ಪ್ರಶ್ನೆಗೆ ಈ ದುರಸ್ತಿಯು ೮೭–೮೮ರ ಸಾಲಿನಿಂದ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಎಂದು ಹೇಳಿದ್ದೀರಿ. ಈ ಉತ್ತರಗಳು ಒಂದೊಂದಕ್ಕೆ ವ್ಯತಿರಿಕ್ತವಾಗಿದೆ. ಆದ್ದರಿಂದ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳಿಂದ ಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಇಲ್ಲಿ ಬಂದು ಉತ್ತರ ಕೊಡಲಿ ವುದಕ್ಕೆ ಆಗುವುದಿಲ್ಲ. ಜಿಲ್ಲಾ ಪರಿಷತ್ತಿಗೆ ಈ ಹಣವನ್ನು ಪಿ.ಡಬ್ಲ್ಯೂ.ಡಿ. ಯಿಂದ ಟ್ರಾನ್ಸ್‌ಫರ್ ಮಾಡುತ್ತೇನೆ. ಈ ಕೆಲಸ ಮಾಡಬೇಕೆಂದು ಜಿಲ್ಲಾ ಪರಿಷತ್ತನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಆದೇಶ ಕೊಡುವುದಕ್ಕೆ ಹೋದರೆ ಅದು ಹಸ್ತಕ್ಷೇಪ ಆಗುತ್ತದೆ.

೧೨–೦೦ ಮಧ್ಯಾಹ್ನ

ಶ್ರೀ ಎನ್. ಎಂ. ಅಡ್ಯಂತಾಯ.—ಆ ರಸ್ತೆಯಲ್ಲಿ ಇಬ್ಬರು ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಯಾಗಿದೆ ಎಂದು ಹೇಳಿದೆ. ಮಾನ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಹೇಳಬೇಕು.

ಅಧ್ಯಕ್ಷರು.—ನೀವು ಸರಿಯಾದ ವಿವರ ಕೊಡಿ, ಎಷ್ಟನೇ ತಾರೀಖು ಆಯಿತು, ಯಾವ ಬಸ್ಸಿನಲ್ಲಿ ಆಯಿತು, ಬಸ್ ನಂಬರ್ ಇತ್ಯಾದಿ ವಿವರಗಳನ್ನು ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಹೆರಿಗೆ ಆಗತಕ್ಕ ಕಾಲ ಬಂದಾಗ, ಬಸ್ಸಿನಲ್ಲಿದ್ದರೂ ಆಗುತ್ತದೆ, ಹೊರಗಡೆಯೂ ಆಗುತ್ತದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಈ ರಸ್ತೆ ತುಂಬಾ ದುರಸ್ತಿಯಲ್ಲಿದೆ. ತಾವು ಜಿಲ್ಲಾ ಪರಿಷತ್ತಿಗೆ ಸರಿಯಾದ ರೀತಿಯಲ್ಲಿ ಆದೇಶ ಕೊಡಬೇಕು ಮತ್ತು ಈ ಕೆಲಸ ಆಗುವಂತೆ ವ್ಯವಸ್ಥೆ ಮಾಡಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಕಾನೂನು ಚೌಕಟ್ಟಿನಲ್ಲಿ ಯಾವರೀತಿ ಸೂಚನೆ ಕೊಡಬೇಕೋ, ಆ ರೀತಿ ಕೊಡುತ್ತೇನೆ.